



# ಕಟಿಯಾಭರಣ

ಕತ್ತಿಗೆ ಆಭರಣ ತೊಟ್ಟು ಮಿಂಚುವಂತೆ ಕಟಿಗೂ ಒಡವೆ ತೊಟ್ಟು ಸೌಂದರ್ಯ ಮೆರೆಯಬಹುದು. ರಾಣಿಯರ ಕಾಲದಲ್ಲಿ ಸೀರೆಯ ಮೇಲೆ ಕೀಚೈನ್‌ಗಳಂತಹ ಒಡವೆಗಳು ಅವಶ್ಯಕವಾಗಿತ್ತು. ಈಗ ಅದೇ ಫ್ಯಾಷನ್ ಟ್ರೆಂಡ್ ಆಗಿದೆ.

■ ಕೃಷ್ಣವೇಣಿ ಪ್ರಸಾದ್ ಮುಳಿಯ

ಸೀರೆ ಉಟ್ಟಾಗ ಕೆಲವೊಂದು ಆಭರಣ ಮಹಿಳೆಯ ಅಂದವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಸೀರೆಗೆ ಕಾಂಬಿನೇಷನ್ ಒಡವೆಗಳಾದ ನೆಕ್ಲೇಸ್, ಬ್ರೇಸ್ಲೆಟ್, ಉಂಗುರ, ಬಳೆಗಳು ಮಾಮೂಲಿ. ಇದರ ಜೊತೆಗೆ ಇನ್ನಷ್ಟು ಮೆರುಗು ನೀಡಲು ಸೊಂಟದ ಆಭರಣ (ಕಟಿಯಾಭರಣ) ಡಾಬು, ಮಾಂಗ್ಟೀಕಾ ಮುಂತಾದವು ಈಗ ಮತ್ತೆ ಮುನ್ನೆಲೆಗೆ ಬಂದಿದೆ. ಫ್ಯಾಷನ್ ಲೋಕದಲ್ಲಿ ಇನ್ನಿಲ್ಲದಂತೆ ಮಿಂಚುತ್ತಿವೆ.

ಸೀರೆಗೆ ಅಂದ ಚಂದದ ಸೊಂಟದ ಪಟ್ಟಿ, ಸೊಂಟದ ಕೀ ಬಂಚ್‌ನಂತೆ ಈ ಆಭರಣ ಇತ್ತು. ರಾಣಿಯರ ಕಾಲದಿಂದಲೂ ತಿಜೋರಿಯ ಕೀಗಳನ್ನು, ಮನೆಯ ಕೀಗಳನ್ನು ಸೊಂಟದಲ್ಲೇ ಇಟ್ಟುಕೊಳ್ಳುತ್ತಿದ್ದ ರೂಢಿ ಇತ್ತು. ಇಂದಿನ ತರ ನಂಬರ್ ಲಾಕ್ ಸಿಸ್ಟಮ್ ಅಂದು ಇರಲಿಲ್ಲ. ಮಹಿಳೆಯೇ ಎಲ್ಲಾ ಭದ್ರತೆಗಳನ್ನು ಗಮನದಲ್ಲಿಟ್ಟುಕೊಂಡು ನೋಡಿಕೊಳ್ಳುತ್ತಿದ್ದಳು. ಕೀಗಳನ್ನು ಮಾತ್ರ ಸೊಂಟದಲ್ಲಿ ಬಳಸಿದಲ್ಲಿ ಅದೇ ಎದ್ದು ಕಾಣುವ ಒಡವೆ. ಹಾಗಾಗಿ ಸೊಂಟದ ಭಾಗಕ್ಕೆ ಆಭರಣದೊಂದಿಗೆ ಕೀಗಳನ್ನು ಜೋಡಿಸಿ ತೊಟ್ಟುಕೊಳ್ಳುತ್ತಿದ್ದರು. ಆಗ ಅದೊಂದು ಫ್ಯಾಷನ್ ಎಂಬ ಪರಿಕಲ್ಪನೆಯೂ ಇಲ್ಲದೆ ಅವಶ್ಯಕತೆ ಎಂದು ಬಿಂಬಿಸಲಾಗುತ್ತಿತ್ತು.